2021–2022 ನೇ ಸಾಲಿನ ವಾರ್ಷಿಕ ವರದಿ

1. ಪ್ರಸ್ತಾವನೆ (Introduction):

ಆನೇಕಲ್ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸಂಸ್ಥೆಯಾಗಿದ್ದು, ಈ ಪ್ರಾಧಿಕಾರದ ಕಛೇರಿಯು "ಅಣ್ಣ" ಸಂಖ್ಯೆ 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

2. ಆನೇಕಲ್ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳಲ್ಲಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ಭಾಗದಲ್ಲಿರುತ್ತದೆ. ಈ ಮೊದಲು ಸರ್ಕಾರದಿಂದ ಅನುಮೋದಿಸಿದ ರಚನಾ ನಕ್ಷೆಯಂತೆ, APZ–5ರಲ್ಲಿ ಬರುತ್ತಿದ್ದು, ಸದರಿ APZ–5ರ ಪ್ರದೇಶದಲ್ಲಿನ ಬೆಳವಣಿಗೆಗಳನ್ನು ನೇರವಾಗಿ ಬಿಎಂಆರ್‌ಡಿಎ ಕಾಯ್ದೆಯಂತೆ, ಅನುಮತಿಗಳನ್ನು ನಿಯಂತ್ರಿಸಲಾಗುತ್ತಿತ್ತು. ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ APZ–5ರ ಪ್ರದೇಶವನ್ನು ಆನೇಕಲ್ ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 4ಎ ರಂತೆ ಸರ್ಕಾರದಿಂದ ಆದೇಶ ಸಂಖ್ಯೆ:ನಅಇ 72 ಬೆಂರೂಪ್ರಾ 2003 ದಿನಾಂಕ:03–03–2006 ರಂತೆ, ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 31 ಬೆಂರೂಪ್ರಾ 2006ರ ದಿನಾಂಕ:19–07–2006 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 127 ಬಿಎಂಆರ್ 2018, ದಿನಾಂಕ:06.08.2018 ರಂತೆ, ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 4ಸಿ ರಂತೆ ಆನೇಕಲ್ ಯೋಜನಾ ಪ್ರಾಧಿಕಾರವನ್ನು ಈ ಕೆಳಕಂಡಂತೆ ರಚಿಸಲಾಗಿರುತ್ತದೆ.

1. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ	ಅಧ್ಯಕ್ಷರು
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	ಸದಸ್ಯ–ಕಾರ್ಯದರ್ಶಿಗಳು
3. ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಸ್ಥಳೀಯ ಸಂಸ್ಥೆಗಳ ಪೈಕಿ ಒಬ್ಬ ಪ್ರತಿನಿಧಿ	ಸದಸ್ಯರು
4. ಯೋಜನಾ ವ್ಯಾಪ್ತಿಯೊಳಗೆ ಬರುವ ಸ್ಥಳೀಯ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಪೈಕಿ ಒಬ್ಬ ಪ್ರತಿನಿಧಿ	ಸದಸ್ಯರು
5. ರಾಜ್ಯ ಸರ್ಕಾರವು ಆಯ್ಕೆ ಮಾಡುವ ಮೂರು ಸದಸ್ಯರು (ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು 1965ರ ಅನ್ವಯ ಅರ್ಹತೆ ಪಡೆದವರು)ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯನಿರ್ವಹಣಾಧಿಕಾರಿ ಸದಸ್ಯರು, ಬೆಂಗಳೂರು ನಗರ	ಸದಸ್ಯರು

	ಜಿಲ್ಲಾಧಿಕಾರಿಗಳು/ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಉಪವಿಭಾಧಿಕಾರಿಗಳು ಹಾಗೂ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸದಸ್ಯರಾಗಿರುತ್ತಾರೆ.	

ಸರ್ಕಾರದಿಂದ ನಾಮನಿರ್ದೇಶನವಾದ ಹಾಲಿ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ಈ ಕೆಳಕಂಡಂತಿದೆ,

2.ಎ. ನಅಇ 76 ಬಿಎಂಆರ್ 2019, ದಿನಾಂಕ:19–12–2019 ಇದರಲ್ಲಿ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4–ಸಿ (3)(1)ರಡಿಯಲ್ಲಿ ಸರ್ಕಾರವು ಅಧಿಕಾರೇತರ ಅಧ್ಯಕ್ಷರನ್ನಾಗಿ ಶ್ರೀ ಕೆ.ಜಯಣ್ಣ ಇವರನ್ನು ನಾಮನಿರ್ದೇಶನ ಮಾಡಲಾಗಿದೆ.

2.ಬಿ. ನಅಇ 76 ಬಿಎಂಆರ್ 2019(ಇ–ಆಫೀಸ್), ದಿನಾಂಕ:11–02–2020 ಇದರಲ್ಲಿ ಶ್ರೀ ರಾಜಶೇಖರರೆಡ್ಡಿ ಹಾಗೂ ಶ್ರೀ ಅಶೋಕ್ ರೆಡ್ಡಿ ಇವರುಗಳನ್ನು ಆನೇಕಲ್ ಯೋಜನಾ ಪ್ರಾಧಿಕಾರದ ಸದಸ್ಯರುಗಳನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

2.ಸಿ ನಅಇ 76 ಬಿಎಂಆರ್ 2019(ಇ–ಆಫೀಸ್), ದಿನಾಂಕ:16–03–2020 ಇದರಲ್ಲಿ ಶ್ರೀ ನಾಗೇಂದ್ರ ಇವರನ್ನು ಆನೇಕಲ್ ಯೋಜನಾ ಪ್ರಾಧಿಕಾರದ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಯೋಜನಾ ಪ್ರಾಧಿಕಾರದ ಎಲ್ಲೆಯ ನಕ್ಷೆ

3. ಆನೇಕಲ್ ಯೋಜನಾ ಪ್ರಾಧಿಕಾರದ ಸಂಕ್ಷಿಪ್ತ ವರದಿ:

ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ದಕ್ಷಿಣ ಭಾಗದಲ್ಲಿ ಬರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ ಮತ್ತು ಹೊಸಕೋಟೆ ಯೋಜನಾ ಪ್ರದೇಶ ಬರುತ್ತದೆ. ಪೂರ್ವಕ್ಕೆ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಎಲ್ಲೆ ಬರುತ್ತದೆ. ದಕ್ಷಿಣಕ್ಕೆ ತಮಿಳುನಾಡು ರಾಜ್ಯದ ಎಲ್ಲೆಯಾಗಿರುತ್ತದೆ. ಪಶ್ಚಿಮಕ್ಕೆ ಕನಕಪುರ ತಾಲ್ಲೂಕು ಬರುತ್ತದೆ. ಆನೇಕಲ್ ಪಟ್ಟಣವು ಬೆಂಗಳೂರಿನಿಂದ 35ಕಿ.ಮೀ. ದೂರದಲ್ಲಿ ಬರುತ್ತದೆ. ಆನೇಕಲ್ ಯೋಜನಾ ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ – 7, ರಾಷ್ಟ್ರೀಯ ಹೆದ್ದಾರಿ – 207 ಮತ್ತು ರಾಜ್ಯ ಹೆದ್ದಾರಿ–35 ಹಾದುಹೋಗುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ 4ಎ ರ ಅಡಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:72 ಬೆಂರೂಪ್ರಾ 2003, ದಿನಾಂಕ:03.03.2006ರಲ್ಲಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವು ಒಟ್ಟು 170 ಗ್ರಾಮಗಳನ್ನು ಒಳಗೊಂಡಿದ್ದು, ಒಟ್ಟು ವಿಸ್ತೀರ್ಣವು 406.32ಚ.ಕಿ.ಮೀ ಇರುತ್ತದೆ.ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 4ಸಿ ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 31 ಬೆಂರೂಪ್ರಾ 2006ರ ದಿನಾಂಕ:19.07.2006 ರಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಆನೇಕಲ್ ಯೋಜನಾ ಪ್ರಾಧಿಕಾರವು ಶಾಸನ ಬದ್ಧ ಯೋಜನಾ ಪ್ರಾಧಿಕಾರವಾಗಿದ್ದು, ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಇರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ; ನಅಇ 36 ಬಿಎಂಆರ್ 2016, ದಿನಾಂಕ:24.06.2016 ಇದರಲ್ಲಿ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರವನ್ನು ರಚಿಸಿದ್ದು, ಸದರಿ ಪ್ರಾಧಿಕಾರಕ್ಕೆ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ 170 ಗ್ರಾಮಗಳ ಪೈಕಿ 47 ಗ್ರಾಮಗಳನ್ನು ಸೇರಿಸಲಾಗಿರುತ್ತದೆ

ಆನೇಕಲ್ ಯೋಜನಾ ಪ್ರದೇಶದಲ್ಲಿ 01ನಗರಸಭೆ, 04ಪುರಸಭೆ ಹಾಗೂ 123 ಗ್ರಾಮಗಳನ್ನು ಒಳಗೊಂಡಿದ್ದು, ಒಟ್ಟು ವಿಸ್ತೀರ್ಣವು 268.11ಚ.ಕಿ.ಮೀ. ಇರುತ್ತದೆ. ಇದರ ಜನಸಂಖ್ಯೆಯು 2011ರ ಜನಗಣತಿಯಂತೆ, 2,69,089 ಲಕ್ಷಗಳಾಗಿರುತ್ತದೆ. ಮುಖ್ಯವಾಗಿ ಆನೇಕಲ್ ತಾಲ್ಲೂಕಿನ ಆನೇಕಲ್ ಕಸಬಾ, ಅತ್ತಿಬೆಲೆ, ಜಿಗಣಿ ಮತ್ತು ಸರ್ಜಾಪುರ ಹೋಬಳಿಯ ಭಾಗಶಃ ಗ್ರಾಮಗಳು ಒಳಪಟ್ಟಿರುತ್ತದೆ.

4. ಯೋಜನಾ ಪ್ರಾಧಿಕಾರದ ಕಾರ್ಯಚಟುವಟಿಕೆಗಳು:

ಯೋಜನಾ ಪ್ರಾಧಿಕಾರದ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿವೆ:

- ನಗರ ಮತ್ತು ಗ್ರಾಮೀಣ ಪ್ರದೇಶದ ಯೋಜನಾ ಬದ್ಧ ಬೆಳವಣಿಗೆ ಉತ್ತೇಜಿಸಲು ಮತ್ತು ನಿಯಂತ್ರಿಸಲು ಭೂ ಉಪಯೋಗ ಒಳಗೊಂಡಂತೆ ನಕ್ಷೆಯನ್ನು ತಯಾರಿಸುವುದು.

- ರಸ್ತೆ ಪರಿಚಲನ ನಕ್ಷೆ ತಯಾರಿಸುವುದು ಮತ್ತು ಮಹಾಯೋಜನೆ ತಯಾರಿಸಿ ಅನುಷ್ಠಾನಗೊಳಿಸುವುದು.
- ನಗರ ಯೋಜನಾ ಸ್ಕೀಮ್‌ಗಳನ್ನು ತಯಾರಿಸಿ ಕಾರ್ಯಗತಗೊಳಿಸುವುದು. ಸ್ಥಳೀಯ ಯೋಜನಾ ಪ್ರದೇಶದ ಅಭಿವೃದ್ಧಿಗಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು.

5. ಕಛೇರಿಯ ಕಾರ್ಯನಿರ್ವಹಣೆ:

ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆಯಂತೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾಯ್ದೆಯಂತೆ ಯೋಜನಾ ಪ್ರದೇಶಗಳಲ್ಲಿ ಬರುವ ಜಾಗಗಳಿಗೆ ನಿಯಮಗಳ ಪ್ರಕಾರ ಅಂದರೆ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡುವುದು, ವಿನ್ಯಾಸ ಅನುಮೋದನೆ ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಇದಲ್ಲದೇ ಅನಧಿಕೃತ ಅಭಿವೃದ್ಧಿಗಳನ್ನು ಸಹ ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತದೆ.

6. ಪ್ರಾಧಿಕಾರದ ಕಾರ್ಯವಿಧಾನ ಮತ್ತು ಕರ್ತವ್ಯಗಳು:

ಕ್ರ. ಸಂ.	ಅಧ್ಯಕ್ಷರು	ಸದಸ್ಯ–ಕಾರ್ಯದರ್ಶಿ	ಸದಸ್ಯರು
1.	a. ಕೆ.ಟಿ.ಸಿ.ಪಿ. ಕಾಯ್ದೆ 1961 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರನ್ವಯ ಪ್ರಾಧಿಕಾರದ ಸಭೆಯನ್ನು ನಡೆಸುವುದು. b. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ: **ನಿಯಮ–12(2)ರನ್ವಯ** ಪ್ರಾಧಿಕಾರದ ಸಭೆಗಳ ಆದೇಶಗಳನ್ನು ಕಾಯ್ದಿರಿಸಲು ಬೇಕಾಗುವ ಎಲ್ಲಾ ಅಧಿಕಾರವನ್ನು ಹೊಂದಿರುತ್ತಾರೆ. **ನಿಯಮ–12(3)ರನ್ವಯ** ಸಭೆಯ ಯಾವುದೇ ಇತರೆ	1.ಕೆ.ಟಿ.ಸಿ.ಪಿ. ಕಾಯ್ದೆ 1961 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರನ್ವಯ, ಹಾಗೂ ಸರ್ಕಾರದ ಆದೇಶದಂತೆ ಕಾರ್ಯನಿರ್ವಹಿಸುವುದು. 2. ಕೆ.ಟಿ.ಸಿ.ಪಿ ಕಾಯ್ದೆ 1961 ಸೆಕ್ಷನ್ 4(H) ರನ್ವಯ ಸದಸ್ಯ ಕಾರ್ಯದರ್ಶಿಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸಿರುತ್ತಾರೆ. a. ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಮತ್ತು ತಾಂತ್ರಿಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು. b. ಪ್ರಾಧಿಕಾರದ ಆಯವ್ಯಯ ಮತ್ತು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು.	ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದು.

	ಸದಸ್ಯರ ವರ್ತನೆಯಿಂದ ಸಭೆಯಲ್ಲಿ ಅವ್ಯವಸ್ಥೆ ಏರ್ಪಟ್ಟಾಗ, ಅಂತಹ ಸದಸ್ಯರನ್ನು ಸಭೆಯಿಂದ ನಿರ್ಗಮಿಸುವಂತೆ ಕ್ರಮಕೈಗೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. **ನಿಯಮ–12(4)ರನ್ವಯ** ಸಭೆಗಳಲ್ಲಿ ಅನಾನುಕೂಲತೆ ಏರ್ಪಟ್ಟಾಗ ತಾತ್ಕಾಲಕ್ಕೆ ಸಭೆ ಸ್ಥಗಿತಗೊಳಿಸಿ ಸಭೆಗಳನ್ನು ಮುಂದೂಡಲು ಅಧಿಕಾರವುಳ್ಳವರಾಗಿರುತ್ತಾರೆ.	c. ಪ್ರಾಧಿಕಾರದ ಆಡಳಿತಾತ್ಮಕ ಮತ್ತು ಲೆಕ್ಕ ಶಾಖೆಯ ಮತ್ತು ಇತರೆ ವಿವರಗಳನ್ನು ಪ್ರಾಧಿಕಾರ ಕೋರಿದಾಗ ಒದಗಿಸುವುದು. d. ಪ್ರಾಧಿಕಾರದ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನೆ ಮಾಡಿರುವ ಲೆಕ್ಕ ಪತ್ರಗಳನ್ನು ಅನುಮೋದನೆಗಾಗಿ ಆರ್ಥಿಕ ವರ್ಷ ಪೂರ್ಣಗೊಂಡ ಮೂರು ತಿಂಗಳ ಒಳಗಾಗಿ State Town Planning Board, Director of Town Planning ಮತ್ತು ಸರ್ಕಾರಕ್ಕೆ ಸಲ್ಲಿಸುವುದು.	

7. <u>ತೀರ್ಮಾನ ಕೈಗೊಳ್ಳುವುದರಲ್ಲಿ ನಿಯಂತ್ರಣ ಮತ್ತು ಜವಾಬ್ದಾರಿಯು ಸೇರಿದಂತೆ ಅನುಸರಿಸಬೇಕಾದ ಕಾರ್ಯವಿಧಾನ:</u>

ಪ್ರಾಧಿಕಾರದಲ್ಲಿ ಸಾರ್ವಜನಿಕ ಮತ್ತು ಇತರೆ ಕಛೇರಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಸದಸ್ಯ ಕಾರ್ಯದರ್ಶಿಯವರು ನಿಯಮಗಳನ್ವಯ ಪರಿಶೀಲಿಸಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ ಪ್ರಾಧಿಕಾರದ ತಿರ್ಮಾನದಂತೆ ಕ್ರಮಕೈಗೊಳ್ಳಲಾಗತ್ತದೆ. ಈ ವಾರ್ಷಿಕ ಅವಧಿಯಲ್ಲಿ 03ಸಭೆಯನ್ನು ನಡೆಸಲಾಗಿದ್ದು, ಸಭೆಯ ತೀರ್ಮಾನದಂತೆ ಕ್ರಮಕೈಗೊಳ್ಳಲಾಗಿದೆ ಇನ್ನುಳಿದಂತೆ ಪ್ರಾಧಿಕಾರದ ಅಧಿಕಾರ ಪ್ರತ್ಯೋಜನೆ ಹಾಗೂ ಸರ್ಕಾರದ ನಿರ್ದೇಶನದಂತೆ ಕ್ರಮ ತೆಗೆದುಕೊಳ್ಳಲಾಗುವುದು.

8. <u>ಕರ್ತವ್ಯ ನಿರ್ವಹಣೆಗಾಗಿ ನಿಗಧಿಪಡಿಸಲಾದ ಸೂತ್ರಗಳು:</u>

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತದೆ.

9. <u>ಪ್ರಾಧಿಕಾರದಲ್ಲಿ ಪಾಲಿಸುವ ಕಾಯ್ದೆಗಳು / ನಿಯಮಗಳ / ಸೂಚನೆಗಳ ಕೈಪಿಡಿ ಮತ್ತು ದಾಖಲಾತಿಗಳ ವಿವರಗಳು:</u>

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961
2. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965
3. ಕರ್ನಾಟಕ ಸಿನಿಮಾ (Regulation)ಕಾಯ್ದೆ
4. ಕೆ.ಸಿ.ಎಸ್.ಆರ್.
5. ಕೆ.ಎಫ್.ಸಿ.
6. ಮಹಾಯೋಜನೆ – 2031 ಮತ್ತು ವರದಿಯ ವಲಯನಿಯಮಗಳು

10. <u>ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಾಸ್ತಾವೇಜುಗಳು:</u>

1. ಮಧ್ಯಂತರ ಮಹಾಯೋಜನೆ.
2. ಮಹಾಯೋಜನೆ – 2031 ನಕ್ಷೆಗಳು ಮತ್ತು ವರದಿ.
3. ಅನುಮೋದಿತ ವಿನ್ಯಾಸ ನಕ್ಷೆಗಳು.
4. ಆಯವ್ಯಯ ನಗದು ಪುಸ್ತಕಗಳು.
5. ಭೂ ಪರಿವರ್ತನೆಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡಿದ ಕಡತಗಳು.
6. ಕಟ್ಟಡ ನಿರ್ಮಾಣಕ್ಕೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರಗಳ ಕಡತಗಳು.
7. ಆಡಳಿತಾತ್ಮಕ ಕಡತಗಳು.
8. ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ವಹಿ.
9. ಇತರೆ ಕಡತಗಳು.

11. <u>ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು:</u>

1.	ಸಾರ್ವಜನಿಕ ಅಧಿಕಾರಿ	ಮಾಹಿತಿ –	ನಗರ ಮತ್ತು ಗ್ರಾಮಾಂತರ ಯೋಜನಾ ಉಪನಿರ್ದೇಶಕರು
2.	ಪ್ರಥಮ ಪ್ರಾಧಿಕಾರ	ಮೇಲ್ಮನವಿ –	ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು

ಮಾಹಿತಿ ಹಕ್ಕು ಅಧಿನಿಯಮದಡಿ ಪ್ರಸಕ್ತ ವರ್ಷದಲ್ಲಿ 78 ಅರ್ಜಿಗಳನ್ನು ಸ್ವೀಕರಿಸಿದ್ದು, 78 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಹಾಗೂ 08 ಮೇಲ್ಮನವಿ ಪ್ರಕರಣಗಳ ವಿಚಾರಣೆ ನಡೆಸಲಾಗಿದೆ15 ಪ್ರಕರಣಗಳಿಗೆ ಹಣಪಾವತಿಗಾಗಿ ಪತ್ರ ನೀಡಲಾಗಿದೆ.

12. ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:

a. ಆನೇಕಲ್ ಯೋಜನಾ ಪ್ರಾಧಿಕಾರದ ಕಛೇರಿಯಲ್ಲಿ ಸಾರ್ವಜನಿಕರು ಮಾಹಿತಿಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿದೆ. ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತಂತೆ ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕ ಗಮನಕ್ಕೆ ತರಲಾಗುತ್ತಿದೆ. ನಾಗರೀಕ ಸನ್ನದು ಪ್ರಕಟಿಸಲಾಗಿದೆ.

b. **ಅಂತರ್ಜಾಲ (Website):**

ಆನೇಕಲ್ ಯೋಜನಾ ಪ್ರಾಧಿಕಾರದ ಅಂತರ್ಜಾಲ (Website) www.anekal.tpa.gov.inರಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದ ಚಟುವಟಿಕೆಗಳ ಬಗ್ಗೆಯ ಮಾಹಿತಿಗಳು ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ. ಹಾಗೂ e-vinyasa.kar.nic.inರಲ್ಲಿ ಪ್ರಾಧಿಕಾರದಿಂದ ಅನುಮೋದಿಸಲಾಗಿರುವ ಬಹುನಿವೇಶನಗಳ ವಸತಿ ಬಡಾವಣೆಗಳ ಮಾಹಿತಿ ಹಾಗೂ ಸಿ.ಎ. ನಿವೇಶನಗಳ ಬಗ್ಗೆ ಮಾಹಿತಿ ಲಭ್ಯವಿರುತ್ತದೆ ಹಾಗೂ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆ – 2031 ಮತ್ತು ವಲಯನಿಯಮಾವಳಿಗಳನ್ನು ಪ್ರಕಟಿಸಲಾಗಿದೆ.

13. ಪ್ರಾಧಿಕಾರದ 2021–22ನೇ ಸಾಲಿನ ಕಾರ್ಯಚಟುವಟಿಕೆಗಳು:

i. **ಭೂ ಪರಿವರ್ತನೆ:** ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ/67/ಎಲ್.ಜಿ.ಪಿ/2018, ದಿನಾಂಕ:20.02.2019 ರನ್ವಯ ಹಾಗೂ ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಇವರ ಪತ್ರ ಸಂಖ್ಯೆ:ಬಿ.ಎಂ.ಸಿ/ಎ.ಎಲ್.ಎನ್/33/2019–20, ದಿನಾಂಕ:26.08.2019 ರನ್ವಯ ಅಫಿಡೆವಿಟ್ ಆಧಾರಿತ ಭೂ ಪರಿವರ್ತನಾ ತಂತ್ರಾಂಶದಲ್ಲಿ ಭೂ ಪರಿವರ್ತನೆ ಕೋರಿ ಬರುವ ಅರ್ಜಿಗಳಿಗೆ ಜಿಲ್ಲಾಧಿಕಾರಿಗಳಿಂದ ಆನ್‌ಲೈನ್ ಮುಖಾಂತರ ಪ್ರಾಧಿಕಾರದಲ್ಲಿ ಅರ್ಜಿ ಸ್ವೀಕರಿಸಲಾಗುತ್ತಿದ್ದು, ನಿಗಧಿತ ಅವಧಿಯಲ್ಲಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ಮತ್ತು ವಲಯನಿಯಮಾವಳಿಗಳಲ್ಲಿ ಕಲ್ಪಿಸಿರುವ ಅವಕಾಶಗಳಂತೆ ಪ್ರಾಧಿಕಾರದಿಂದ ಆನ್‌ಲೈನ್ ಮುಖಾಂತರವೇ ಮಾನ್ಯ ಜಿಲ್ಲಾಧಿಕಾರಿಗಳಿಗೆ ಅಭಿಪ್ರಾಯ ನೀಡಲಾಗುವುದು. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರಕ್ಕೆ ವ್ಯವಸಾಯ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆಗೊಳಿಸುವ ವಿಚಾರಗಳಿಗೆ ಅನುಮತಿಗಾಗಿ ಪ್ರಸ್ತಾವನೆಗಳನ್ನು ಕಳುಹಿಸಲಾಗುತ್ತಿದೆ. ಈ ಸಂಬಂಧ ಒಟ್ಟು 667 ಪ್ರಕರಣಗಳನ್ನು ಸ್ವೀಕರಿಸಿದ್ದು, ಈ ಪೈಕಿ 492 ಪ್ರಕರಣಗಳನ್ನು ಭೂ ಪರಿವರ್ತನೆಗೆ ಶಿಫಾರಸ್ಸು ಮಾಡಲಾಗಿದೆ. 76 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. ಉಳಿದ 93 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

ii. **ವಿನ್ಯಾಸ ಅನುಮೋದನೆ:** ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ಕ್ಕೆ ಸಂ.ವ್ಯಾಶಾಇ 24 ಶಾಸನ 2015, ದಿನಾಂಕ:10–09–2015ರಲ್ಲಿ ಆದ ತಿದ್ದುಪಡಿಯಂತೆ ಅರ್ಜಿದಾರರು ಜಿಲ್ಲಾಧಿಕಾರಿಗಳಿಂದ ನೀಡಿರುವ ಭೂ ಪರಿವರ್ತನಾ ಆದೇಶ ಮತ್ತು ಜಮೀನಿಗೆ ಸಂಬಂಧಿಸಿದಂತೆ ಕ್ರಯಪತ್ರ, ಸರ್ವೇಸ್ಕೆಚ್ ಇತ್ಯಾದಿ ದಾಖಲೆಗಳನ್ನು ಸಲ್ಲಿಸಿದಲ್ಲಿ ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯಲ್ಲಿ ತೀರ್ಮಾನಿಸಿದಂತೆ ವಿನ್ಯಾಸ

ನಕ್ಷೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಕರಡು ವಸತಿ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಅರ್ಜಿದಾರರು ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರಿಕ ಸೌಲಭ್ಯದ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸ್ಥಳೀಯ ಸಂಸ್ಥೆ KSPCB, Bescom, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,ತೋಟಗಾರಿಕೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಪ್ರಾಧಿಕಾರದ ಸಭೆಯ ಮಂದೆ ಮಂಡಿಸಿ, ಸಭೆಯ ತೀರ್ಮಾನದಂತೆ ಅಂತಿಮ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಿ ವಿನ್ಯಾಸದಲ್ಲಿನ ಎಲ್ಲಾ ಶೇ.100ರಷ್ಟು ನಿವೇಶನಗಳನ್ನು ನೊಂದಣಿಗೆ ಬಿಡುಗಡೆ ಮಾಡಲಾಗುತ್ತಿದೆ.

ಕೆ.ಟಿ.ಸಿ.ಪಿ ಕಾಯ್ದೆ ತಿದ್ದುಪಡಿ ದಿನಾಂಕ:22.05.2020ರಂತೆ ಕಲಂ17(2)ಗೆ "ಸಿ" ಯನ್ನು ಸೇರ್ಪಡಿಸಲಾಗಿದ್ದು, ಅದರಂತೆ ಅಭಿವೃದ್ದಿದಾರರು ಇಚ್ಚಿಸಿದಲ್ಲಿ ವಿನ್ಯಾಸವನ್ನು ಹಂತಹಂತವಾಗಿ ಮೂರು ಹಂತಗಳಲ್ಲಿ ಅಭಿವೃದ್ದಿಪಡಿಸಬಹುದಾಗಿದೆ, ಅಭಿವೃದ್ದಿದಾರರು ಹಂತಹಂತವಾಗಿ ಅಭಿವೃದ್ದಿಪಡಿಸುವ ನಕ್ಷೆಯನ್ನು ಸಲ್ಲಿಸಿ, ಮೊದಲನೇ ಹಂತದಲ್ಲಿ ಶೇ 40%ರಷ್ಟುಪ್ರದೇಶ ಮತ್ತು ನಂತರ ಶೇ.30% ಹಾಗೂ ಶೇ.30%ರಷ್ಟು ಪ್ರದೇಶ ಅಭಿವೃದ್ದಿ ಪಡಿಸಬಹುದಾಗಿದೆ.

ಕೆ.ಟಿ.ಸಿ.ಪಿ ಕಾಯ್ದೆ ತಿದ್ದುಪಡಿ ದಿನಾಂಕ:05.07.2021ರಂತೆ ಕಲಂ 17ರ (2–ಸಿ) ಗೆ(1)ನ್ನು ಸೇರ್ಪಡೆಮಾಡಲಾಗಿದೆ, ಅದರಂತೆ ಅಭಿವೃದ್ದಿದಾರರು ಇಚ್ಚಿಸಿದಲ್ಲಿ ವಿನ್ಯಾಸದಲ್ಲಿನ ನಿವೇಶನಗಳನ್ನು ಎರಡು ಹಂತದಲ್ಲಿ ಬಿಡುಗಡೆಪಡೆಯಬಹುದಾಗಿದೆ, ಮೊದಲನೆ ಹಂತದ ಶೇ.40% ರಷ್ಟರ ನಿವೇಶನಗಳನ್ನು ವಿನ್ಯಾಸದಲ್ಲಿ ಒಟ್ಟಾರೆ ಪ್ರದೇಶದಲ್ಲಿ ಮೂಲೆ ನಿವೇಶನಗಳನ್ನು ಹೊರತುಪಡಿಸಿ,ಚದುರಿದಂತೆ ಪಡೆಯಬಹುದಾಗಿದೆ, ಶೇ 40%ರಷ್ಟರ ಮೊದಲನೇ ಹಂತದ ನಿವೇಶನ ಬಿಡುಗಡೆ ಪಡೆಯಲು ಎ)ಸಾರ್ವಜನಿಕ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಹಸ್ತಾಂತರಿಸಬೇಕಾಗಿರುತ್ತದೆ, ಬಿ)ವಿನ್ಯಾಸದಲ್ಲಿನ ಮೂಲ ನಿವೇಶನಗಳನ್ನು ಪ್ರಾಧಿಕಾರಕ್ಕೆ ನೊಂದಾಯಿತ ಅಡಮಾನ ಕರಾರು ಪತ್ರ ನೀಡಬೇಕಾಗಿರುತ್ತದೆ ಮತ್ತು ಸಿ)ಪ್ರಸ್ತಾಪಿತ ಯೋಜನೆಯು ರೆರಾ ನೊಂದಾಣಿಯಾಗಿರಬೇಕು.

ಸರ್ಕಾರದ ಸುತ್ತೋಲೆ ಸಂ.ನಅಇ 112 ಬೆಂರೂಪ್ರಾ 2005, ದಿನಾಂಕ:26–05–2005 ರನ್ವಯ ಈ ಹಿಂದಿನ ಪ್ರಕರಣಗಳಿಗೆ (ಹಳೆಯ ಕಡತಗಳು) ಶೇ.60:40 ಅನುಪಾತದಲ್ಲಿ ನಿವೇಶನ ಬಿಡುಗಡೆಗೊಳಿಸಲಾಗುತ್ತಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 599 ಮೈಅಪ್ರಾ 2012, ದಿನಾಂಕ:03–12–2012 ಮತ್ತು ಸರ್ಕಾರದ ಸುತ್ತೋಲೆ ಸಂ.ನಅಇ 08 ಟಿಟಿಪಿ 2013, ದಿನಾಂಕ:24–05–2014 ರನ್ವಯ ಹಿಂದಿನ ಪ್ರಕರಣಗಳಿಗೆ (ಹಳೆಯ ಕಡತಗಳು) ಶೇ.40:30:30ರ ಅನುಪಾತದಲ್ಲಿ ನಿವೇಶನ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 17 ರಂತೆ ವಿನ್ಯಾಸ ಅನುಮೋದನೆ ಸಂಬಂಧ ಪ್ರಸ್ತುತ ಸಾಲಿನಲ್ಲಿ ಏಕ ನಿವೇಶನ ವಿನ್ಯಾಸ ಅನುಮೋದನೆ ಸಂಬಂಧ ಒಟ್ಟು 39ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಿಂದಿನ ಸಾಲಿನಲ್ಲಿ ಪ್ರಗತಿಯಲ್ಲಿದ್ದ 36 ಪ್ರಕರಣಗಳನ್ನು ಸೇರಿಸಿ ಒಟ್ಟು 75 ಪ್ರಕರಣಗಳ ಪೈಕಿ ಪ್ರಸ್ತುತ ಸಾಲಿನಲ್ಲಿ 25 ಪ್ರಕರಣಗಳಿಗೆ ಅನುಮೋದನೆ ನೀಡಲಾಗಿದ್ದು, 50 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಸಾಲಿನಲ್ಲಿ ವಸತಿ ವಿನ್ಯಾಸ ಅನುಮೋದನೆ ಸಂಬಂಧ ಒಟ್ಟು 25 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಿಂದಿನ ಸಾಲಿನಲ್ಲಿ ಪ್ರಗತಿಯಲ್ಲಿದ್ದ 15 ಪ್ರಕರಣಗಳನ್ನು ಸೇರಿಸಿ ಒಟ್ಟು 40 ಪ್ರಕರಣಗಳ ಪೈಕಿ ಪ್ರಸ್ತುತ ಸಾಲಿನಲ್ಲಿ 18 ಪ್ರಕರಣಗಳಿಗೆ ಅನುಮೋದನೆ ನೀಡಲಾಗಿದ್ದು, 22 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ ಮತ್ತು ಪ್ರಸ್ತುತ ಸಾಲಿನಲ್ಲಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ

ಸಂಬಂಧ ಒಟ್ಟು 10 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಿಂದಿನ ಸಾಲಿನಲ್ಲಿ ಪ್ರಗತಿಯಲ್ಲಿದ್ದ 02 ಪ್ರಕರಣಗಳನ್ನು ಸೇರಿಸಿ ಒಟ್ಟು 12 ಪ್ರಕರಣಗಳ ಪೈಕಿ ಪ್ರಸ್ತುತ ಸಾಲಿನಲ್ಲಿ 06 ಪ್ರಕರಣಗಳಿಗೆ ಅನುಮೋದನೆ ನೀಡಲಾಗಿದ್ದು, 06 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಅನುಮೋದಿಸಲಾದ 09 ವಸತಿ ವಿನ್ಯಾಸ ಪ್ರಕರಣಗಳಲ್ಲಿ ಒಟ್ಟು 1253 ನಿವೇಶನಗಳನ್ನು ಇ–ವಿನ್ಯಾಸ ತಂತ್ರಾಂಶದ ಮೂಲಕ ನೊಂದಣಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ 05 ವಿನ್ಯಾಸ ಅನುಮೋದನೆ ಪ್ರಕರಣಗಳಲ್ಲಿ ಒಟ್ಟು 704ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ 26 ಶಾಸನ 2021, ಬೆಂಗಳೂರು ದಿನಾಂಕ:05.07.2021ರನ್ವಯ ಕರಡು ಅನುಮೋದನೆಯಾಗಿರುವ 08 ವಸತಿ ವಿನ್ಯಾಸ ನಕ್ಷೆಯ ಪ್ರಕರಣಗಳಲ್ಲಿ ಮೊದಲನೆ ಹಂತದ ಶೇ.40ರಷ್ಟು 660 ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

iii. **<u>ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ:</u>** ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಟ್ಟಲ್ಪಡುವ ಕಟ್ಟಡಗಳಿಗೆ ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 15 ರಂತೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಾಧಿಕಾರದಿಂದ ನೀಡಲಾಗುತ್ತಿದ್ದು, ಪ್ರಸ್ತುತ ವರ್ಷದಲ್ಲಿ 758 ಅರ್ಜಿಗಳನ್ನು ಸ್ವೀಕರಿಸಿದ್ದು, ಇದರಲ್ಲಿ 549 ಅರ್ಜಿಗಳಿಗೆ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ. 79 ಪ್ರಕರಣಗಳಿಗೆ ಹಿಂಬರಹ ನೀಡಲಾಗಿದೆ. ಉಳಿದ 128 ಪ್ರಕರಣಗಳು ಪ್ರಗತಿಯಲ್ಲಿರುತ್ತವೆ. 02 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ.

iv. **<u>ಮಹಾಯೋಜನೆ – 2031 (M.P.):</u>** ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013 ದಿನಾಂಕ:03–09–2014ರನ್ವಯ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾದ ಮಹಾಯೋಜನೆ – 2031 ಇದಕ್ಕೆ ಅಂತಿಮ ಅನುಮೋದನೆ ನೀಡಲಾಗಿರುತ್ತದೆ.

a. ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013 ದಿನಾಂಕ:03–09–2014ರನ್ವಯ ಅನುಮೋದಿತ ಮಹಾಯೋಜನೆ – 2031ರಂತೆ ಹಾಲಿ ಭೂ ಉಪಯೋಗದ ವಿವರಗಳು ಈ ಕೆಳಕಂಡಂತಿದೆ;

EXISTING LAND USE ANALYSIS – 2012

Sl No.	Use	Area in Ha	Percentage
1.	Residential	2944.23	41.98%
2.	Commercial	93.62	1.33%
3.	Industrial	1482.36	21.14%
4.	Public & Semi Public	174.66	2.49%
5.	Park & Open Space	183.10	2.61%
6.	Public Utility	9.88	0.14%
7.	Transportation	1928.72	27.50%
8.	Vacant	196.61	2.80%
Sub Total		**7013.18**	**100.00%**
9.	Agriculture	28436.08	-
10.	Water Bodies	2326.32	-

11.	Forest	2156.10	-
12.	Hillock's/Quarries	298.35	-
Grand Total		**40230.03**	**-**

b. **ಆನೇಕಲ್ ಸ್ಥಳೀಯ ಯೋಜನಾ ಪ್ರದೇಶಕ್ಕೆ 2031 ಇಸವಿಗೆ ಒಟ್ಟು 16.00ಲಕ್ಷ ಜನಸಂಖ್ಯೆ ಆಗಬಹುದೆಂದು ಲೆಕ್ಕಹಾಕಿ ಇದಕ್ಕೆ ಬೇಕಾಗಬಹುದಾದ 23,917.0 ಹೆಕ್ಟೇರ್ಸ್ ಜಮೀನನ್ನು ನಗರೀಕರಣ ಎಲ್ಲೆಗೆ (Conurbation limit) ನಿಗಧಿಪಡಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013 ದಿನಾಂಕ:03–09–2014ರನ್ವಯ ಅನುಮೋದಿತ ಮಹಾಯೋಜನೆ – 2031 ರಂತೆ ಪ್ರಸ್ತಾವಿತ ಭೂ ಉಪಯೋಗದ ವಿವರಗಳು ಈ ಕೆಳಕಂಡಂತಿದೆ;**

PROPOSED LAND USE - 2031

Sl.No.	Land use	Area in Ha	Percentage
1.	Residential	11230.69	46.96%
2.	Commercial	768.32	3.21%
3.	Industrial	5099.95	21.32%
4.	Public & Semi Public	840.27	3.51%
5.	Park and Open Space	2003.78	8.38%
6.	Public Utilities	31.16	0.13%
7.	Transportation	3943.22	16.49%
	Total	**23917.39**	**100.00%**
8.	Agriculture	630.48	
9.	Water Bodies	2147.11	
10.	Forest	33.46	
11.	Hillock's/Quarries	43.31	
	Total Urbanisable Area	**26771.76**	
12.	Agriculture	10260.96	
13.	Water Bodies	853.88	
14.	Forest	2093.46	
15.	Hillock's/Quarries	249.98	
	Total	**40230.03**	

ಸೂಚನೆ: ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ:24–06–2016ರಂತೆ ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮೇಲ್ಕಂಡ ವಿಸ್ತೀರ್ಣದ ಪ್ರದೇಶದ ಪೈಕಿ 47ಗ್ರಾಮಗಳ ಒಟ್ಟು ವಿಸ್ತೀರ್ಣ 13821.89ಹೆಕ್ಟೇರ್ ಪ್ರದೇಶವನ್ನು ಉಪನಗರ ಹೊರವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

14. <u>ಪ್ರಾಧಿಕಾರದ ಆರ್ಥಿಕ ಸ್ಥಿತಿಗತಿ:</u>

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ ಅಡಿಯಲ್ಲಿ ವಿವಿಧ ಶುಲ್ಕಗಳಿಂದ ಮತ್ತು ನಿಶ್ಚಿತ ಠೇವಣಿಗಳ ಬಡ್ಡಿಯಿಂದ 2021–22ನೇ ಸಾಲಿನಲ್ಲಿ ರೂ.22.51 ಕೋಟಿ ಸಂಗ್ರಹಿಸಲಾಗಿದೆ. ಪ್ರಾಧಿಕಾರದ ವತಿಯಿಂದ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಹೂಡಲಾಗಿದೆ.

ಸರ್ಕಾರದ ಪತ್ರ ಸಂಖ್ಯೆ: ನಅಇ 36 ಬೆಮಪ್ರಾ 2016 (ಭಾಗ) ದಿನಾಂಕ:27–01–2017ರಂತೆ ಒಂದು ಚ.ಮೀ.ಗೆ ರೂ.25/–ರಂತೆ ಕೆರೆ ಪುನರುಜ್ಜೀವನ ಶುಲ್ಕವನ್ನು ಸಂಗ್ರಹಿಸಿ ಪ್ರತ್ಯೇಕ ಖಾತೆಯಲ್ಲಿ ಜಮಾ ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ಸಂಗ್ರಹಿಸಿದ ಮೊತ್ತವನ್ನು ಸೇರಿಸಿ ಒಟ್ಟು ಮೊತ್ತ ರೂ.131.51 ಕೋಟಿಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಹೂಡಲಾಗಿದೆ. ಸದರಿ ಮೊತ್ತದಲ್ಲಿ ರೂ.64.24ಕೋಟಿಗಳನ್ನು ಕೆರೆಗಳನ್ನು ಅಭಿವೃದ್ಧಿಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

15. <u>ಪ್ರಾಧಿಕಾರದ ಹಣಕಾಸಿನ ಸಹಾಯದಿಂದ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರಗಳು</u>

ಸರ್ಕಾರದಿಂದ 2012–2017 ನೇ ಸಾಲಿನವರೆಗೆ ಒಟ್ಟು ಮೊತ್ತ ರೂ.1,47,76,45,000/–ಗೆ ಕಾಮಗಾರಿಗಳು ಮಂಜೂರಾಗಿದ್ದು ಈ ಪೈಕಿ ದಿನಾಂಕ: 31–03–2022ರವರೆಗೆ ರೂ100,80,08,206/– ಕಾಮಗಾರಿ ಕೈಗೊಂಡಿರುವುದಕ್ಕೆ ಹಣ ಪಾವತಿಯಾಗಿರುತ್ತದೆ. ಬಾಕಿ ಪಾವತಿಸಬೇಕಾದ ಮೊತ್ತ ರೂ.46,96,36,794/–ಗಳಾಗಿರುತ್ತದೆ.

- **<u>ಸರ್ಕಾರದ ಆದೇಶ ಸಂಖ್ಯೆ: ನಅಇ130ಬಿಎಂಆರ್‌2017,ದಿನಾಂಕ:22–12–2017ರಂತೆ ಕಛೇರಿ ಕಟ್ಟಡ ಕಟ್ಟಲು ಆಡಳಿತಾತ್ಮಕ ಅನುಮೋದನೆ ನೀಡಿರುವ ವಿವರಗಳು:</u>**

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	2019–20ನೇ ಹಣಕಾಸಿನ ಸಾಲಿನಲ್ಲಿ ಪಾವತಿಸಿರುವ ಬಿಲ್ ಮೊತ್ತ
	ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕಾಮಗಾರಿಗಳು		
1.	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.48/1, 49/1, 49/2, 50 ಮತ್ತು 51/2ರಲ್ಲಿನ ಒಟ್ಟು 09ಎಕರೆ 33ಗುಂಟೆ ವಿಸ್ತೀರ್ಣದಲ್ಲಿ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿನ 1988ಚ.ಮೀ. ವಿಸ್ತೀರ್ಣದ ನಾಗರೀಕ ಸೌಕರ್ಯ ನಿವೇಶನದಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದ ಕಛೇರಿ ಕಟ್ಟಡ	497.00	–

- **ಸರ್ಕಾರದ ಆದೇಶ ಸಂಖ್ಯೆ: ನಅಇ 71 ಬಿಎಂಆರ್ 2017, ದಿನಾಂಕ:02–08–2017 ರಂತೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುವ ಕೆರೆ ಅಭಿವೃದ್ಧಿ ಕಾಮಗಾರಿಗಳ ಬಿಲ್ ಪಾವತಿಯ ವಿವರಗಳು:**

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	2019–20ನೇ ಹಣಕಾಸಿನ ಸಾಲಿನಲ್ಲಿ ಪಾವತಿಸಿರುವ ಬಿಲ್ ಮೊತ್ತ
1.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಕೆರೆ ಅಭಿವೃದ್ಧಿ ಕಾಮಗಾರಿ.	617.00	–
2.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ರಾಗಿಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ.	103.00	**1,03,00,000**/–
3.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ವಡೇರಮಂಚನಹಳ್ಳಿ ಕೆರೆಅಭಿವೃದ್ಧಿ ಕಾಮಗಾರಿ.	468.00	–
4.	ದೊಡ್ಡತಿಮ್ಮಸಂದ್ರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
5.	ಕೂಗೂರು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
6.	ತಿಂಡ್ಲು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	60.00	–
7.	ಯಮರೆ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
8.	ನೆರಿಗಾ ಗ್ರಾಮದ ಕೆರೆ (ಚಿಕ್ಕಕೆರೆ) ಅಭಿವೃದ್ಧಿ ಕಾಮಗಾರಿ	50.00	–
9.	ಸರ್ಜಾಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	150.00	–
10.	ಬಿಲ್ಲಾಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
11.	ಅಡಿಗಾರಕಲ್ಲಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
12.	ಬಿಕ್ಕನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
13.	ಹಂದೇನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	50.00	–
14.	ಮುತ್ತಾನಲ್ಲೂರು ಗ್ರಾಮದ ದೇವರಕೆರೆ ಅಭಿವೃದ್ಧಿ ಕಾಮಗಾರಿ	50.00	–
15.	ಬಿದರಗುಪ್ಪೆ ಗ್ರಾಮದ ಕೆರೆ (ಚಿಕ್ಕಕೆರೆ / ಗುಮ್ಮರೆಟ್ಟಿ ಕೆರೆ) ಅಭಿವೃದ್ಧಿ ಕಾಮಗಾರಿ	100.00	–
16.	ನೆರಳೂರು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	100.00	–
17.	ಬಳ್ಳೂರು ಗ್ರಾಮದ ರಾಮಯ್ಯನ ಕೆರೆ ಅಭಿವೃದ್ಧಿ ಕಾಮಗಾರಿ	50.00	–
18.	ಮಾಯಸಂದ್ರ ಗ್ರಾಮದ ಚಿಕ್ಕಕೆರೆ ಅಭಿವೃದ್ಧಿ ಕಾಮಗಾರಿ	50.00	–
19.	ಗುಡ್ನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	100.00	–

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	2019–20ನೇ ಹಣಕಾಸಿನ ಸಾಲಿನಲ್ಲಿ ಪಾವತಿಸಿರುವ ಬಿಲ್ ಮೊತ್ತ
20.	ಸಮಂದೂರು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	100.00	–
21.	ಸುರಗಜಕ್ಕನಹಳ್ಳಿ ಗ್ರಾಮದ ನಂಜುಂಡಯ್ಯ ಚಿಕ್ಕಕೆರೆ ಅಭಿವೃದ್ಧಿಕಾಮಗಾರಿ	25.00	–
22.	ಆದೂರು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	25.00	–
23.	ಇಂಡ್ಲವಾಡಿಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	200.00	–
24.	ಕರ್ಪೂರು ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	100.00	–
25.	ಬ್ಯಾಗಡದೇನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ	200.00	–
26.	ಶ್ರೀ ಬಂಡಿಮಹಾಂಕಾಳಮ್ಮ ಕೆರೆ ಅಭಿವೃದ್ಧಿ ಕಾಮಗಾರಿ	85.00	–
27.	ಚಂದಾಪುರ ಕೆರೆ ಅಭಿವೃದ್ಧಿ ಕಾಮಗಾರಿ	200.00	–
28.	ಇಗ್ಗಲೂರು ಕೆರೆ ಅಭಿವೃದ್ಧಿ ಕಾಮಗಾರಿ	200.00	–
29.	ಬೊಮ್ಮಸಂದ್ರ ಕೆರೆ ಅಭಿವೃದ್ಧಿ ಕಾಮಗಾರಿ	200.00	–
30.	ಅತ್ತಿಬೆಲೆ ಕೆರೆ ಅಭಿವೃದ್ಧಿ ಕಾಮಗಾರಿ	200.00	–
31.	ಆನೇಕಲ್ ಮುಳ್ಳಿಕೆರೆ ಅಭಿವೃದ್ಧಿ ಕಾಮಗಾರಿ	200.00	–
32.	ಕಾಡುಜಕ್ಕನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ	499.00	–
33.	ಇಂಡ್ಲವಾಡಿ ಕೆರೆ ಅಭಿವೃದ್ಧಿ ಕಾಮಗಾರಿ	497.00	–
34.	ತಮ್ಮನಾಯಕನಹಳ್ಳಿಕೆರೆ ಅಭಿವೃದ್ಧಿ ಕಾಮಗಾರಿ	495.00	–

- **ಸರ್ಕಾರದ ಆದೇಶ ಸಂಖ್ಯೆ: ನಅಇ 71 ಬಿಎಂಆರ್ 2017 (ಭಾಗ), ದಿನಾಂಕ:10–10–2018 ರಂತೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುವ ಕೆರೆ ಪುನರುಜ್ಜೀವನ ಕಾಮಗಾರಿಗಳ ಬಿಲ್ ಪಾವತಿಯ ವಿವರಗಳು:**

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	2019–20ನೇ ಹಣಕಾಸಿನ ಸಾಲಿನಲ್ಲಿ ಪಾವತಿಸಿರುವ ಬಿಲ್ ಮೊತ್ತ
1.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜಿಗಣಿ ಕೆರೆ ಅಭಿವೃದ್ಧಿ ಕಾಮಗಾರಿ.	950.00	–

ಸರ್ಕಾರದಿಂದ ಮಂಜೂರಾದ ಕೆರೆ ಕಾಮಗಾರಿಗಳ ಒಟ್ಟು ಮೊತ್ತ ರೂ.64,24,00,000/– ಈ ಪೈಕಿ ದಿನಾಂಕ:31–03–2021ರವರೆಗೆ ರೂ.1,03,00,000/–ಗಳನ್ನು ಪಾವತಿಯಾಗಿರುತ್ತದೆ. ಬಾಕಿ ಪಾವತಿಸಬೇಕಾದ ಮೊತ್ತ ರೂ.63,21,00,000/–ಗಳಾಗಿರುತ್ತದೆ.

16. ಆನೇಕಲ್ ಯೋಜನಾ ಪ್ರಾಧಿಕಾರದ 2020–21ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳು / ಕಾರ್ಯಚಟುವಟಿಕೆಗಳು:

i. ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ – 2031ಅನ್ನು ಪರಿಷ್ಕರಿಸುವುದು;

ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ 170 ಗ್ರಾಮಗಳ, 402.30 ಚ.ಕಿ.ಮೀ. ವ್ಯಾಪ್ತಿಗೆ ಮತ್ತು ಹಾಲಿ 2011ರ ಜನಸಂಖ್ಯೆಯಂತೆ 3.55 ಲಕ್ಷಗಳಾಗಿದ್ದು, 2031ಕ್ಕೆ ಜನಸಂಖ್ಯೆಯನ್ನು 16 ಲಕ್ಷಗಳಾಗುವುದಾಗಿ ಪರಿಗಣಿಸಿ ಮಹಾಯೋಜನೆ – 2031ಕ್ಕೆ ಸರ್ಕಾರದ ಆದೇಶ ಸಂಖ್ಯೆ:ನಅಇ 151 ಬಿಎಂಆರ್ 2013 ದಿನಾಂಕ:03–09–2014ರಂತೆ ಅನುಮೋದನೆ ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 36 ಬಿಎಂಆರ್ 2016, ದಿನಾಂಕ:24–06–2016ರಂತೆ 47 ಹಳ್ಳಿಗಳು ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿರುತ್ತದೆ. ಇದರ ವ್ಯಾಪ್ತಿಯು 138.21 ಚ.ಕಿ.ಮೀ. ಇದ್ದು, 85,911 ಜನಸಂಖ್ಯೆ ಹೊಂದಿರುತ್ತದೆ. ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿರುವ ಪ್ರದೇಶವನ್ನು ಹೊರತುಪಡಿಸಿದಲ್ಲಿ ಆನೇಕಲ್ ಯೋಜನಾ ಪ್ರದೇಶದ ವ್ಯಾಪ್ತಿಯು 268.11ಚ.ಕಿ.ಮೀ. ಆಗಿದ್ದು, ಇದರ ಜನಸಂಖ್ಯೆಯು 2011ರ ಜನಗಣತಿಯಂತೆ, 2,69,089 ರುತ್ತದೆ.

ಚಾಲ್ತಿಯಲ್ಲಿರುವ ಮಹಾಯೋಜನೆಯು ದಿನಾಂಕ:03.09.2014ರಂದು ಸರ್ಕಾರದಿಂದ ಅನುಮೋದನೆಯಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13ಡಿ ರನ್ವಯ 10ವರ್ಷಗಳಲ್ಲಿ ಒಂದು ಸಲವಾದರು ಮಹಾಯೋಜನೆ ಪರಿಷ್ಕರಿಸಬೇಕಾಗಿರುತ್ತದೆ. ಅದರಂತೆ ಮಹಾಯೋಜನೆ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗುವುದು.

ii. ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳ ಹಂಚಿಕೆ:

ಅನುಮೋದನೆಗೊಂಡ ಬಡಾವಣೆಗಳಲ್ಲಿ ಕಾಯ್ದಿರಿಸಿರುವ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:UDD/27/TTP/2016, ದಿನಾಂಕ:24–05–2017ರಂತೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮಗಳು – 2016ಅನ್ನು ರಚಿಸಲಾಗಿರುತ್ತದೆ. ಸದರಿ ನಿಯಮಾವಳಿಯಂತೆ ಸರ್ಕಾರದ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯದ ನಿವೇಶನ ಹಂಚುವ ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ 11 ನಿವೇಶನಗಳ ಪೈಕಿ ಈ ಕೆಳಗಿನ ಕಛೇರಿಗಳಿಗೆ ದಿನಾಂಕ:31.03.2022ರವರೆಗೆ ಹಂಚಿಕೆ ಮಾಡಲಾಗಿದೆ.

- ಬೆಸ್ಕಾಂ–07
- ಆರ್.ಟಿ.ಓ–01
- ಮಹಿಳಾ ಮತ್ತು ಮಕ್ಕಳ ಕಲ್ಯಾಣ,=01
  (ಅಂಗನವಾಡಿ)
- ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯಿತಿಗೆ=02
  (ನೀರು ಸಂಗ್ರಹಣ ಘಟಕಕ್ಕೆ)

ಒಟ್ಟು= 11

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿ ತಯಾರಿಸಿ, ಸರ್ಕಾರದ ವಿವಿಧ ಇಲಾಖೆಗಳ ಕಛೇರಿಗಳಿಗೆ ನಾಗರೀಕ ಸೌಲಭ್ಯ ನಿವೇಶನಗಳ ಅವಶ್ಯವಿದ್ದಲ್ಲಿ ನಿಗಧಿತ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆ ಗಳಿಗೆ ಸೂಚನೆ ನೀಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಇವರಿಗೆ ಪತ್ರ ಸಂಖ್ಯೆ:ಆಯೋಪ್ರಾ/ಸಿಎ ನಿವೇಶನ/01/2017–18 ದಿನಾಂಕ:21.10.2020 ರಂದು ಪತ್ರ ಬರೆಯಲಾಗಿದೆ.

iii. **<u>ಪ್ರಾಧಿಕಾರಕ್ಕೆ ಸ್ವಂತ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ:</u>**

ಪ್ರಸುತ ಆನೇಕಲ್ ಯೋಜನಾ ಪ್ರಾಧಿಕಾರ ಕಛೇರಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸ್ವಂತ ಕಛೇರಿ ಕಟ್ಟಡ ನಿರ್ಮಿಸುವ ಸಂಬಂಧ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.68/2 ಮತ್ತು 69/3ರಲ್ಲಿ ಒಟ್ಟು 02ಎಕರೆ 28ಗುಂಟೆ ಪ್ರದೇಶದಲ್ಲಿ ಸಂಖ್ಯೆ:ಬಿಎಂಆರ್‌ಡಿಎ/ಎಲ್‌ಎಓ/14/2003–04, ದಿನಾಂಕ:29–08–2003ರಲ್ಲಿ ಅನುಮೋದನೆಯಾಗಿರುವ ವಿನ್ಯಾಸದಲ್ಲಿನ 30.01+21.03/2 36.58ಮೀ. ಅಗಲದ ಸಿ.ಎ. ನಿವೇಶನವನ್ನು ಆಯ್ಕೆ ಮಾಡಿ ರೂ.4.97ಕೋಟಿ ಅಂದಾಜು ಪಟ್ಟಿಗೆ ಸಭೆಯ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುವುದನ್ನು.ಸರ್ಕಾರದ ಆದೇಶ ಸಂಖ್ಯೆ:ನಅಇ 130 ಬಿಎಂಆರ್ 2017, ಬೆಂಗಳೂರು ದಿನಾಂಕ:22.12.2017 ರಲ್ಲಿ ರೂ.4.97 ಕೋಟಿ ಮೊತ್ತಕ್ಕೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಕಟ್ಟಡ ಕಾಮಗಾರಿ ಕೈಗೊಳ್ಳಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ವಹಿಸಲಾಗಿದ್ದು, ಸದರಿ ಇಲಾಖೆಯಿಂದ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

17. **<u>ಪ್ರಾಧಿಕಾರದ ಸಿಬ್ಬಂಧಿ ವಿವರ (Staff Position):</u>**

ಸರ್ಕಾರದ ಆದೇಶ ಸಂಖ್ಯೆ:ನಅಇ/ಬಿಎಂಆರ್/2008 ದಿನಾಂಕ:08–02–2008 ಮತ್ತು ನಅಇ/57/ಬಿಎಂಆರ್/2010 ದಿನಾಂಕ:06–10–2010 ಇವುಗಳಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಈ ಹುದ್ದೆಗಳಿಗೆ ನಿಯೋಜನೆ ಮೇಲೆ ನೇಮಕಾತಿ ಮಾಡಲಾಗುತ್ತಿದೆ.

<u>ಸರ್ಕಾರದಿಂದ ಮಂಜೂರಾದ ವಿವಿಧ ಹುದ್ದೆಗಳು ಈ ಕೆಳಕಂಡಂತಿದೆ:</u>

ಕ್ರ.ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ	ಭರ್ತಿ ಮಾಡಲಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು

1.	ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	1	1	–
2	ನಗರ ಮತ್ತು ಗ್ರಾಮಾಂತರ ಯೋಜನಾ ಉಪನಿರ್ದೇಶಕರು	1	1	–
3	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	2	2	–
4	ನಗರ ಯೋಜಕರು	2	2	–
5	ಸಹಾಯಕ ನಗರ ಯೋಜಕರು	2	–	2
6	"ಡಿ" ಗ್ರೂಪ್	1	–	1
	ಒಟ್ಟು	**9**	**6**	**3**

ದಿನಾಂಕ:01–04–2020 ರಿಂದ ದಿನಾಂಕ:31–03–2021ರವರೆಗಿನ ಅವಧಿಯಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿರುವ ಅಧ್ಯಕ್ಷರು / ಅಧಿಕಾರಿ / ಸಿಬ್ಬಂದಿಗಳ ವಿವರ.

ಕ್ರ.ಸಂ.	ಪದನಾಮ	ಅಧಿಕಾರಿಗಳ ಹೆಸರು	ದಿನಾಂಕ	
			ರಿಂದ	ರವರೆಗೆ
1	ಅಧ್ಯಕ್ಷರು	ಶ್ರೀ ಕೆ.ಜಯಣ್ಣ	01.04.2021	31.03.2022
2	ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	ಶ್ರೀ ಎನ್.ಎಂ.ನಂಜೇಗೌಡ	01.04.2021	04.03.2022
		ಶ್ರೀ.ಪಂಡರಿನಾಥ.ಜಿ.ರೆಡ್ಡಿ	05.03.2022	31.03.2022
3	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	ಶ್ರೀ ಕೆ.ಎನ್.ನಾಗರಾಜ	01.04.2021	14.01.2022
		ಶ್ರೀ.ನಾಗರಾಜಪ್ಪ.ಹೆಚ್	14.01.2022	31.03.2022
4	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	ಶ್ರೀ ಜಗನ್ನಾಥ	01.04.2021	12.05.2021
		ಶ್ರೀಮತಿ ವಿದ್ಯಾ.ಡಿ	01.04.2021	31.03.2022
		ಶ್ರೀ.ಶಿವಪ್ರಸಾದ್.ವಿ	04.07.2021	31.03.2022
5	ನಗರ ಯೋಜಕರು	ಶ್ರೀಮತಿ ಓ.ಜಾನಕಿ	01.04.2021	31.03.2022
		ಶ್ರೀ ಮಹಂತೇಶ್	01.04.2021	31.03.2022

18. ಪ್ರಾಧಿಕಾರದ ಆಯವ್ಯಯ 2022–23(Budget):

ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965 ನಿಯಮ 22ರನ್ವಯ ಆನೇಕಲ್ ಯೋಜನಾ ಪ್ರಾಧಿಕಾರದ 2021–22ನೇ ಸಾಲಿನ ಆಯವ್ಯಯವನ್ನು ಪ್ರಾಧಿಕಾರದ 74ನೇ ಸಭೆಯಲ್ಲಿ ಅನುಮೋದಿಸಲಾಗಿದೆ. ಕೆಳಕಂಡ ಕಾರ್ಯಕ್ರಮಗಳ ಕಾರ್ಯಗತಕ್ಕಾಗಿ ಆಯಾ ಕೆಲಸ ಕಾರ್ಯಗಳ ಮುಂದೆ ತೋರಿಸಲಾದ ಮೊಬಲಗನ್ನು ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

ಕ್ರ.ಸಂ.	ವಿವರಗಳು	ಕೋಟಿ ರೂ.ಗಳಲ್ಲಿ
1.	Rejuvenations of Tanks	**63 ಕೋಟಿ**
2.	Construction of Planning Authority office Building	**06 ಕೋಟಿ**
3.	Providing Hardware and Software for data management system	**3 ಲಕ್ಷ**
4.	As per the Government Order amount reserved for Civil works	**51 ಕೋಟಿ**

19. Budget estimate for the year 2022-23

Opening balance	**9,44,15,641/-**
Receipts	320,05,85,800/-
Total Receipts	**329,50,01,441/-**
Total Payments	301,89,76,000/-
Surplus	27,60,25,441/-

20. 2020–21ನೇ ಸಾಲಿನ ಲೆಕ್ಕ ತಪಾಸಣಾ ವರದಿ:

2020–21ನೇ ಸಾಲಿನ ಲೆಕ್ಕ ತನಿಖೆಯನ್ನು ಹೆಚ್ಚುವರಿ ಉಪ ನಿಯಂತ್ರಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು ರಾಜ್ಯ ಲೆಕ್ಕ ಪತ್ರ ಇಲಾಖೆ, ಇವರು ದಿನಾಂಕ:24.04.2021ರಿಂದ 30.04.2021ರವರೆಗೆ ಪ್ರಾಧಿಕಾರದಲ್ಲಿ ಲೆಕ್ಕ ತಪಾಸಣೆ ಕೈಗೊಂಡಿದ್ದು, ಸದರಿ ಲೆಕ್ಕ ತಪಾಸಣೆ ವರದಿಯು ದಿನಾಂಕ:23.11.2021ಲ್ಲಿ ಸ್ವೀಕೃತವಾಗಿದ್ದು, ಅನುಸರಣಾ ವರದಿಯನ್ನು ತಯಾರಿಸಿ ದಿನಾಂಕ:27.01.2022ರಲ್ಲಿ ಸಲ್ಲಿಸಲಾಗಿದೆ.

21. ಕೆರೆಗಳ ಸಂರಕ್ಷಣೆ ಶುಲ್ಕ ವಸೂಲಾತಿ:

ಸರ್ಕಾರದ ಪತ್ರ ಸಂಖ್ಯೆ:ನಅಇ 90 ಬಿಎಂಆರ್ 2010, ದಿನಾಂಕ:29–09–2010ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ಎ(1)ರನ್ವಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ (Rejuvenation of Tanks) ಸಲುವಾಗಿ ಖಾಸಗಿ ವಿನ್ಯಾಸ ಮಾಲೀಕರಿಂದ ಪ್ರತಿ ಎಕರೆಗೆ ರೂ.1,00,000/–ರಂತೆ ಹಾಗೂ ಸರ್ಕಾರದ ಪತ್ರ ಸಂಖ್ಯೆ: ನಅಇ 3 ಟಿಟಿಪಿ 2015 ದಿನಾಂಕ:25–02–2020ರಂತೆ ಒಂದು ಚ.ಮೀ.ಗೆ ರೂ.25/–

ರಂತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.22,51,39,820/– ಸಂಗ್ರಹವಾಗಿದೆ.

22. **<u>ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು:</u>**

2021–22ನೇ ಸಾಲಿಗೆ ಆರ್ಥಿಕ ವಹಿವಾಟುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:

ಕ್ರ.ಸಂ.	ತಿಂಗಳು	ಸ್ವೀಕೃತಿ (ಠೇವಣಿ ಹಿಂಪಡೆತ ಸೇರಿ)	ವೆಚ್ಚ (ಠೇವಣಿ ಹೂಡಿಕೆ ಸೇರಿ)
1.	ಏಪ್ರಿಲ್ 2021	**71,80,370/–**	**2,23,09,611/–**
2.	ಮೇ 2021	**8,93,22,682/–**	**6,54,125/–**
3.	ಜೂನ್ 2021	**21,05,404/–**	**40,11,038/–**
4.	ಜುಲೈ 2021	**1,11,39,632/–**	**11,40,294/–**
5.	ಆಗಸ್ಟ್ 2021	**52,83,36,058/–**	**1,35,78,942/–**
6.	ಸೆಪ್ಟಂಬರ್ 2021	**2,61,69,224/–**	**64,36,26,556/–**
7.	ಅಕ್ಟೋಬರ್ 2021	**65,76,83,067/–**	**64,14,29,432/–**
8.	ನವೆಂಬರ್ 2021	**1,00,27,064/–**	**14,22,100/–**
9.	ಡಿಸೆಂಬರ್ 2021	**1,45,94,600/–**	**90,97,968/–**
10.	ಜನವರಿ 2022	**86,86,926/–**	**11,00,674/–**
11.	ಫೆಬ್ರವರಿ 2022	**2,63,97,422/–**	**65,87,176/–**
12.	ಮಾರ್ಚ್2022	**1,21,36,184/–**	**17,79,454/–**
	ಒಟ್ಟಣಚಿಟ	**139,37,78,633/–**	**134,67,37,370/–**

ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.